# ಒಟಿಟಿ ಸಹವಾಸವೇ ಬೇಡ: ಜಾನ್




ಕೆಲವು ನಟರು ಆರಕ್ಕೇರದೆ, ಮೂರಕ್ಕಿಳಿಯದೆ ಇದ್ದರೂ ಅಂಥವರಿಗೆ ಮಾರುಕಟ್ಟೆಯ ದಿಡ್ಡಿ ಬಾಗಿಲು ಸದಾ ತೆರೆದಿರುತ್ತದೆ. ಜಾನ್ ಅಬ್ರಹಾಂ ಅಂಥವರ ಸಾಲಿಗೆ ಸೇರಿದವರು. ತಮ್ಮ ದೇಹಾಕಾರದಿಂದಲೇ ಚಿತ್ರರಂಗದ ವೇದಿಕೆ ಮೇಲೆ ಫೋಕಸ್ ಲೈಟ್ ಬೀಳುವಂತೆ ನೋಡಿಕೊಂಡಿರುವ ಅವರು ನಟಿಸಿರುವ 'ಮುಂಬೈ ಸಾಗಾ' ಹಿಂದಿ ಚಿತ್ರ ಬಿಡುಗಡೆಯಾಗಿದೆ. ಕೋವಿಡ್ ಸೋಂಕು ಕಾಣಿಸಿಕೊಂಡ ಮೇಲೆ ದೊಡ್ಡ ಬಜೆಟ್‌ನ ಹಿಂದಿ ಚಿತ್ರಗಳು ಚಿತ್ರಮಂದಿರಗಳಿಗೆ ಲಗ್ಗೆಇಡಲು ಹಿಂದೇಟು ಹಾಕಿದ್ದವು. 'ಆಗಿದ್ದು ಆಗಲಿ, ನೋಡಿಯೇ ಬಿಡೋಣ' ಎಂದುಕೊಂಡು ಜಾನ್ ಈ ಪ್ರಯತ್ನಕ್ಕೆ ಇಂಬುಗೊಟ್ಟಿದ್ದಾರೆ.

ನಿರ್ಮಾಪಕ ಭೂಷಣ್‌ಕುಮಾರ್ ಹಾಗೂ ನಿರ್ದೇಶಕ ಸಂಜಯ್ ಗುಪ್ತಾ ಇಬ್ಬರೂ ಒಟಿಟಿಯಲ್ಲಿ ಈ ಸಿನಿಮಾ ತೆರೆಕಾಣಿಸುವ ಆಲೋಚನೆಯಲ್ಲಿದ್ದರು. ಅವರಿಗೆ ಜಾನ್ ಬುದ್ಧಿ ಹೇಳಿ, ಒಟಿಟಿ ಸಹವಾಸ ಬೇಡ ಎಂದು ಮನದಟ್ಟು ಮಾಡಿಸಿದರು. 'ಯಾವ ನಟರಿಗೆ ತಮ್ಮ ಚಿತ್ರದ ಮೇಲೆ ಹೆಚ್ಚು ವಿಶ್ವಾಸ ಇಲ್ಲವೋ ಅಂಥ ಸರಕುಗಳನ್ನೆಲ್ಲ ಒಟಿಟಿಗೆ ಬಿಡುತ್ತಿದ್ದಾರೆ. ಅಲ್ಲಿ ಬಿಡುಗಡೆಯಾದ ಬಹುಪಾಲು ಚಿತ್ರಗಳ ಗುಣಮಟ್ಟ ತೋಪು. ನಮಗೆ ನಮ್ಮ ಚಿತ್ರದ ಮೇಲೆ ನಂಬಿಕೆ ಇದೆ. ಚಿತ್ರಮಂದಿರಗಳಿಗೆ ಜನ ಬರಲು ಈಗ ಸಿದ್ಧರಿದ್ದಾರೆ. ಲಾಭ ಎಷ್ಟು ಬರುವುದೋ ನೋಡೋಣ. ಆದರೆ, ಒಟಿಟಿ ಸಹವಾಸ ಬೇಡ' ಎನ್ನುವುದು ಜಾನ್ ಫಿಲ್ಟರ್ ಇಲ್ಲದ ಮಾತು.

ಇಮ್ರಾನ್ ಹಶ್ಮಿ, ಸುನಿಲ್ ಶೆಟ್ಟಿ, ಕಾಜಲ್ ಅಗರ್ವಾಲ್, ಮಹೇಶ್ ಮಂಜ್ರೇಕರ್ ಮೊದಲಾದವರು ನಟಿಸಿರುವ 'ಮುಂಬೈ ಸಾಗಾ' ಬಂದೂಕು ನಳಿಕೆಗಳ ಕಥೆಯನ್ನೇ ಹೊಂದಿದೆ. ಜನಪ್ರಿಯತೆಯ ಪರಿಧಿಯಿಂದ ಇದ್ದಕ್ಕಿದ್ದಂತೆ ಆಚೆ ಸರಿದಿದ್ದ ಯೋ ಯೋ ಹನಿ ಸಿಂಗ್ ಈ ಚಿತ್ರದ ಒಂದು ಹಾಡಿಗೆ ಸ್ವರ ಸಂಯೋಜನೆ ಮಾಡಿರುವುದು ವಿಶೇಷ.



# ಮಹೇಶ್ ಬಾಬುಗೆ ಸಂದೀಪ್ ನಿರ್ದೇಶನ

■ ವಿಶಾಖ ಎನ್.

ಕರ್ನಾಟಕದಲ್ಲಿ ಫಿಸಿಯೊಥೆರಪಿ ಓದಿಕೊಂಡು ಹೋಗಿ, ಸಿನಿಮಾ ಹುಚ್ಚು ಹತ್ತಿಸಿಕೊಂಡು, ವಿದೇಶದಲ್ಲಿ ಕಲಿತು ಬಂದ ಸಂದೀಪ್ ರೆಡ್ಡಿ ವಂಗ ಮೊದಲ ನಿರ್ದೇಶನದ ಚಿತ್ರದ ಮೂಲಕವೇ ಸಂಚಲನ ಮೂಡಿಸಿದವರು. ತೆಲುಗಿನ 'ಅರ್ಜುನ್ ರೆಡ್ಡಿ' ಅವರಿಗಷ್ಟೇ ಅಲ್ಲದೆ ನಟ ವಿಜಯ್ ದೇವರಕೊಂಡಾ ಅವರಿಗೂ ವೃತ್ತಿಬದುಕು ಕಟ್ಟಿಕೊಟ್ಟಿದ್ದನ್ನು ಕಂಡಿದ್ದೇವೆ. ಹಿಂದಿಯಲ್ಲಿ ಅವರು ನಿರ್ದೇಶಿಸಿದ ಅದೇ ಚಿತ್ರಕಥೆಯ 'ಕಬೀರ್ ಸಿಂಗ್' ಕೂಡ ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ವಹಿವಾಟು ನಡೆಸಿತು. ನಾಯಕನ ಹುಚ್ಚುಖೋಡಿತನವನ್ನೇ ವೈಭವೀಕರಿಸಿ ತೋರಿಸಿ, ಕೀಳು ಅಭಿರುಚಿಯನ್ನು ಪ್ರದರ್ಶಿಸಿದ್ದಾರೆ ಎಂಬ ಟೀಕೆಗಳಿಗೂ ಅವರು ಎದೆಗೊಟ್ಟರು. ಈಗ ಅವರು 'ಅನಿಮಲ್' ಹಿಂದಿ ಚಿತ್ರದ ಸ್ಕ್ರಿಪ್ಟ್ ತಿದ್ದುತ್ತಿದ್ದಾರೆ. ರಣಬೀರ್ ಕಪೂರ್ ಅಭಿನಯದ ಆ ಚಿತ್ರದ ಕುರಿತು ನಿರೀಕ್ಷೆ ಮಡುಗಟ್ಟುತ್ತಿರುವಾಗಲೇ ತೆಲುಗಿನ ಸ್ಟಾರ್ ನಟ ಮಹೇಶ್ ಬಾಬು ಅವರನ್ನು ಸಂದೀಪ್ ನಿರ್ದೇಶಿಸುತ್ತಾರೆ ಎಂಬ ಸುದ್ದಿ ಮೊನ್ನೆ ತೇಲಾಡಿತು.

'ಅನಿಮಲ್' ಚಿತ್ರೀಕರಣ ಮುಗಿಯದೆ ಇನ್ನೊಂದು ಚಿತ್ರವನ್ನು ಅದು ಹೇಗೆ ಈ ನಿರ್ದೇಶಕ ಕೈಗೆತ್ತಿಕೊಂಡರು ಎಂದು ಅನೇಕರು ಚಕಿತಗೊಂಡದ್ದು ನಿಜ. ಅದೂ ಮಹೇಶ್ ಬಾಬು ಒಪ್ಪಿಕೊಳ್ಳಬೇಕೆಂದರೆ, ಕಥೆಯಲ್ಲಿ ಧಮ್ ಇರಲೇಬೇಕು ಎಂದು ಭಾವಿಸಿದರು. ಆಮೇಲೆ ಗೊತ್ತಾದದ್ದು, ಮಹೇಶ್ ಬಾಬು ಒಪ್ಪಿರುವುದು ಸಂದೀಪ್ ನಿರ್ದೇಶಿಸಲಿರುವ ಜಾಹೀರಾತೊಂದರಲ್ಲಿ ನಟಿಸಲು ಎಂದು.

ಟೀವಿ ಜಾಹೀರಾತಿನಲ್ಲಿ ಮಹೇಶ್ ಬಾಬು ನಟಿಸಲಿದ್ದಾರೆ. ಸಾಮಾನ್ಯವಾಗಿ ಅವರು ಪರಿಚಿತ ಅಥವಾ ಈ ಹಿಂದೆ ತಮ್ಮ ಚಿತ್ರ ನಿರ್ದೇಶನ ಮಾಡಿದವರನ್ನಷ್ಟೇ ಜಾಹೀರಾತು ನಿರ್ದೇಶಿಸಲೂ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಸಂದೀಪ್ ರೆಡ್ಡಿ ವಂಗ ಹೆಸರನ್ನು ಜಾಹೀರಾತು ನಿರ್ಮಾಪಕರು ಹೇಳಿದ್ದೇ ತಕ್ಷಣವೇ ಅವರು ಒಪ್ಪಿರುವುದೂ ಸೋಜಿಗದ ಸಂಗತಿ. ಒಂದು ದಿನದ ಮಟ್ಟಿಗೆ ಸಂದೀಪ್ ಈ ಸ್ಟಾರ್ ನಟನನ್ನು ನಿರ್ದೇಶಿಸುವರು. ಈ ಹಿಂದೆ ಸಂದೀಪ್ ಇದೇ ನಟನಿಗೆ ಕಥಾಎಳೆಯೊಂದನ್ನು ಹೇಳಿ, ಸಿನಿಮಾಗಾಗಿ ಒಪ್ಪಿಸಲು ಯತ್ನಿಸಿದ್ದರು. ಆ ಯತ್ನ ವಿಫಲವಾಗಿತ್ತು. ■